ನಂತರ ದಿನಾಂಕ 5.8.95ರಂದು ಇದೇ ಜಾಗದಲ್ಲಿ ಸುಮಾರು 10 ಮೀಟರ್ ಉದ್ದದಷ್ಟು ಲೈನಿಂಗ್ ಸ್ಲಾಬ್ ಜರುಗುವಿಕೆ ಉಂಟಾಗಿದ್ದು, ಅದರ ದುರಸ್ತಿ ಕಾರ್ಯ ಸಹ ಅದೇ ಗುತ್ತಿಗೆದಾರರಿಂದ ಕೈಗೊಳ್ಳಲಾಗುವುದು.

ಆ) ಉದ್ಭವಿಸುವುದಿಲ್ಲ.

ಹಾಯ್ ಹೊಳೆ ಯೋಜನೆ ಕುರಿತು

2185 - ಶ್ರೀ ಅಯನೂರು ಮಂಜುನಾಥ್ (ಹೊಸನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕಿನ ಹಾಯಹೊಳೆ ಯೋಜನೆಯನ್ನು ಯಾವ ವರ್ಷ ಮುಕ್ತಾಯಗೊಳಿಸಲಾಯಿತು;

ಆ) ಇದರ ಒಟ್ಟು ವೆಚ್ಚ ಎಷ್ಟು; ಎಷ್ಟು ಎಕರೆ ಭೂಮಿಗೆ ನೀರು ಸರಬರಾಜಾಗುತ್ತಿದೆ; ಇದರ ಅನುಕೂಲತೆ ಪಡೆಯುವ ಗ್ರಾಮಗಳು ಯಾವುವು;

ಇ) ಈಗ ಹಾಲಿ ಹಾಯಹೊಳೆ ಯೋಜನೆ ಛಾನಲಗಳು ಹೂಳು ತುಂಬಿರುವುದು ಮತ್ತು ಒಡೆದಿರುವುದು ಮತ್ತು ಪ್ರಾರಂಭದಲ್ಲಿ ಅಕ್ವಡಕ್ಟ ಛಾರಿ ಪ್ರಮಾಣದಲ್ಲಿ ಒಡೆದು ಹಾಳಾಗಿ ನೀರು ಸೋರುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ದುರಸ್ತಿಗಾಗಿ ಕೈಗೊಳ್ಳಲಾಗಿರುವ ಕ್ರಮಗಳಾವು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) 1977ರಲ್ಲಿ ಪೂರ್ಣಗೊಳಿಸಲಾಯಿತು.

ಆ) 56.206 ಲಕ್ಷ ರೂ.ಗಳು. 481 ಹೆಕ್ಟೇರ್. ಬಸವನಪುರ, ಅಗಸವಳ್ಳಿ, ಹೊಸಕೊಪ್ಪ, ರಾಮಯ್ಯನಕೊಪ್ಪ, ವೀರಾಪುರ, ತಟ್ಟೆಕೆರೆ, ಈಚವಾಡಿ ಗ್ರಾಮಗಳು ಅನುಕೂಲತೆ ಪಡೆಯುತ್ತಿವೆ.

ಇ) ಬಂದಿದೆ.

ಈ) ಅಂದಾಜನ್ನು ತಯಾರಿಸಲಾಗಿದ್ದು ದುರಸ್ತಿ ಕಾಮಗಾರಿಯನ್ನು ಶೀಘ್ರವಾಗಿ ತೆಗೆದುಕೊಳ್ಳಲಾಗುವುದು.

ರಾಜ್ಯದಲ್ಲಿರುವ ಡಿಸ್ಟಿಲರೀಸಗಳ ಸಂಖ್ಯೆ

2189 - ಶ್ರೀ ಅಶೋಕ ಕಟಾವೆ (ಹುಬ್ಬಳಿ ನಗರ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಒಟ್ಟು ಡಿಸ್ಟಿಲರಿಗಳ ಸಂಖ್ಯೆ ಎಷ್ಟು? ಈ ಡಿಸ್ಟಿಲರಿಯವರು ಯಾವ ಪ್ರಮಾಣದಲ್ಲಿ ಸ್ಪಿರೀಟ್ ಉಪಯೋಗಿಸುವರು?